

بِسْمِ اللهِ الرَّحْمَنِ الرَّحِيمِ

# ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಆತ್ಮ ಹೊಂದಿದವರಾಗಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08-04-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಒಮ್ಮೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾವು ಯಾವಾಗಲೂ ನಮ್ಮನ್ನು ಪರಿಶೋಧಿಸುತ್ತಾ ಇರಬೇಕು– ನಮ್ಮ ಕೆಲಸಗಳು, ನಮ್ಮ ಅನುಷ್ಠಾನ ಕರ್ಮಗಳು, ನಮ್ಮ ತೀರ್ಮಾನಗಳು ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಗೆ ಅನುಯೋಜ್ಯವಾಗಿವೆಯೋ ಇಲ್ಲವೋ ಎಂದು. ಯಾವುದಾದರೂ ವಿಷಯವು ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ಸ್ಪಷ್ಟವಾಗಿ ಮನದಟ್ಟಾಗುವುದಿಲ್ಲವಾದರೆ, ಹಿಂದಿನ ಕಾಲದ ವಿದ್ವಾಂಸರ ಹೇಳಿಕೆ ಮತ್ತು ತೀರ್ಪುಗಳನ್ನು ಅವಲಂಬಿಸಬೇಕು. ಈ ವಿಷಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಮ್ಮೆ ಹೀಗೆ ಕೇಳಲಾಯಿತು: ನಾವು ನಮ್ಮ ಸಮಸ್ಯೆಗಳಿಗೆ ಪರಿಹಾರ ಹೇಗೆ ಕಂಡುಕೊಳ್ಳಬೇಕು ಮತ್ತು ಯಾರಿಂದ ಮಾರ್ಗದರ್ಶನ ಪಡೆಯಬೇಕು? ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾವು ಅನುಸರಿಸುವ ಕ್ರಮ ಹೇಗೆಂದರೆ ಮೊದಲು ಪವಿತ್ರ ಖುರ್‌ಆನ್ ಪ್ರಕಾರ ತೀರ್ಮಾನ ಮಾಡುತ್ತೇವೆ. ಪವಿತ್ರ ಖುರ್‌ಆನ್‌ನಿಂದ ಆ ವಿಷಯದ ಕುರಿತು ತೀರ್ಮಾನ ದೊರೆಯದಿದ್ದರೆ ಹದೀಸಿನಲ್ಲಿ ಪರಿಹಾರ ಹುಡುಕುತ್ತೇವೆ. ಹದೀಸಿನಿಂದಲೂ ಅದಕ್ಕೆ ಪರಿಹಾರ ಸಿಗದಿದ್ದರೆ ಮುಸ್ಲಿಮ್ ಉಮ್ಮತ್‌ನಲ್ಲಿ (ಸಮುದಾಯದಲ್ಲಿ) ಹಿಂದೆ ಮಾಡಲಾದ ತೀರ್ಪುಗಳ ಮತ್ತು ಸಾಕ್ಷ್ಯಾಧಾರಗಳ ಪ್ರಕಾರ ತೀರ್ಪು ನೀಡುತ್ತೇವೆ.

ಇಲ್ಲಿ ಒಂದು ವಿಷಯ ಸ್ಪಷ್ಟವಾಗಿ ತಿಳಿಯಬೇಕಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡೆವಳಿಕೆ (ಸುನ್ನತ್) ಹದೀಸಿಗಿಂತ ಮೇಲಿನ ಸ್ಥಾನದಲ್ಲಿದೆ. ಆದುದರಿಂದ ಸುನ್ನತ್ ಮೂಲಕ ಸಾಬೀತಾಗುವವುಗಳನ್ನು ಅನುಷ್ಠಾನಕ್ಕೆ ತರಲೇಬೇಕಾಗಿದೆ. ಸುನ್ನತ್ ನಂತರ ಹದೀಸಿನ ಸ್ಥಾನ ಬರುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿ ತೋರಿಸಿದುದು ಸುನ್ನತ್ ಆಗಿದೆ. ಸಹಾಬರು ಅವುಗಳನ್ನು ಕಲಿತುಕೊಂಡರು. ಅನಂತರದ ಪೀಳಿಗೆಯ ಜನರು ಸಹಾಬರಿಂದ ಕಲಿತರು. ಹಾಗೆ ಮುಂದಿನ ಪೀಳಿಗೆಗಳು ಕಲಿತು ಕೊಂಡವು ಮತ್ತು ಅವು ಮುಸ್ಲಿಮ್ ಉಮ್ಮತ್‌ನಲ್ಲಿ (ಸಮುದಾಯದಲ್ಲಿ) ಜಾರಿಗೊಂಡವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುವುದೇನೆಂದರೆ ನಾವು ನಮ್ಮ ಜೀವಿತದ ರೀತಿಯ ಬಗ್ಗೆ ದೃಷ್ಟಿಯಿರಿಸಬೇಕು. ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಅನುಮತಿ ನೀಡಿದವುಗಳನ್ನು ಮಾತ್ರ ನಾವು ಮಾಡಬೇಕು. ಕೆಲವು ಜನರ ತಲೆಯಲ್ಲಿ ಒಳಿತು ಮಾಡುವ ಅಭಿಲಾಷೆ ಸವಾರಿ ಮಾಡುತ್ತಾ ಇರುತ್ತದೆ. ಅವರು ಮಿತಿಮೀರಿ ವರ್ತಿಸಲು ಪ್ರಾರಂಭಿಸುತ್ತಾರೆ. ಅವರು ತಮ್ಮ ದೇಹವನ್ನು ಕಷ್ಟಕ್ಕೆ ಗುರಿಪಡಿಸುತ್ತಾರೆ. ಅವರು ತಮ್ಮ ಮೇಲೆಯೇ ದೌರ್ಜನ್ಯ ಮಾಡುತ್ತಾರೆ. ಇನ್ನೊಂದು ವಿಧದ ಜನರು, ಅಥವಾ ಬಹುತೇಕ ಜನರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಮೇಲಿಂದ ಮೇಲೆ ತೆಗೆದುಕೊಳ್ಳುವವರಾಗಿದ್ದಾರೆ. ಮತ್ತು ಅವುಗಳನ್ನು ಪಾಲಿಸುವ ಬಗ್ಗೆ ಎಷ್ಟು ಲಕ್ಷ್ಯ ನೀಡಬೇಕಾಗಿದೆಯೋ ಅಷ್ಟು ಲಕ್ಷ್ಯ ನೀಡುವುದಿಲ್ಲ. ಈ ಎರಡು ರೀತಿಯ ಜನರು ಅತಿರೇಕದಿಂದಲೂ ಮತ್ತು ಕನಿಷ್ಟತೆಯಿಂದಲೂ ವರ್ತಿಸುವವರಾಗಿದ್ದಾರೆ. ಅವರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಹೊರಗೆ ಹೋಗುವವರಾಗಿದ್ದಾರೆ.

ಒಳಿತುಗಳಲ್ಲಿ ಮಿತಿಮೀರಿ ವರ್ತಿಸುವವರ ಕೆಲವು ಉದಾಹರಣೆಗಳಿವೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಬ್ಬ ಮಹಿಳೆಯ ಉದಾಹರಣೆ ನೀಡಿದ್ದಾರೆ. ಆ ಮಹಿಳೆ ಒಳಿತನ್ನು ಮಾಡುವ ಹೆಸರಲ್ಲಿ ಮಾಡಬಯಸಿದ ಕೆಲಸ ವಾಸ್ತವಿಕವಾಗಿ ಒಳಿತಿನ ಕೆಲಸವಾಗಿರಲಿಲ್ಲ. ಏಕೆಂದರೆ ಅಲ್ಲಾಹನು ಮತ್ತು ಅವನ ಸಂದೇಶ ವಾಹಕರು ಅದಕ್ಕೆ ಅನುಮತಿ ನೀಡಿರಲಿಲ್ಲ. ನಾನು ಈ ಬಗ್ಗೆ ವಿವರಿಸುವುದೇಕೆಂದರೆ, ಕೆಲವು ಜನರು ತಮ್ಮ ಸ್ವಪ್ನಗಳಿಗೆ ಬಹಳ ಮಹತ್ವ ನೀಡುತ್ತಾರೆ. ಅಂತಹ ಜನರಿಗೆ ಈ ಘಟನೆಯಲ್ಲಿ ನೀತಿ ಪಾಠವಿದೆ. ಅಂತಹ ಜನರ ಪ್ರತಿಯೊಂದು ಸ್ವಪ್ನವೂ ಸತ್ಯವಾಗಿರುವಂತಹ ಸ್ಥಾನದಲ್ಲಿರಬೇಕೆಂದಿಲ್ಲ. ಪ್ರತಿಯೊಂದು ಸ್ವಪ್ನವೂ ಅರ್ಥಭರಿತವಾಗಿರಬೇಕೆಂದೂ ಇಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಬ್ಬ ಮಹಿಳೆ ನಮ್ಮ ಬಳಿಗೆ ಬಂದರು. ಅವರ ಮಸ್ತಿಷ್ಕದಲ್ಲಿ ಸ್ವಲ್ಪ ನ್ಯೂನತೆ ಇತ್ತು. ಆಕೆ ಹೇಳಿದರು: ನಾನು ಸ್ವಪ್ನದಲ್ಲಿ ಹೀಗೆ ಕಂಡೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಂದು ಹೇಳಿದರು– ನೀನು ಆರು ತಿಂಗಳು ನಿರಂತರವಾಗಿ ಉಪವಾಸ ಮಾಡಿದರೆ ಖಲೀಫತುಲ್ ಮಸೀಹರ ಆರೋಗ್ಯ ಸುಧಾರಣೆ ಗೊಳ್ಳುವುದು. ಇದು ಆರಂಭ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ರೋಗಪೀಡಿತರಾಗಿದ್ದ ಸಮಯದಲ್ಲಿ ನಡೆದ ಘಟನೆಯಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಆ ಮಹಿಳೆಗೆ ಹೇಳಿದೆ– ನಿನ್ನ ಸ್ವಪ್ನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳಿಗಿಂತ ಮೇಲಿನ ಸ್ಥಾನದಲ್ಲಿರಲು ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಇಲ್‌ಹಾಮ್‌ಗಳ ಬಗ್ಗೆ ಹೇಳಿರುವುದು, ನನ್ನ ಯಾವುದಾದರೂ ಇಲ್‌ಹಾಮ್ ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ಗೆ ವಿರುದ್ಧವಾಗಿದ್ದರೆ ನಾನು ಅದನ್ನು ಗಂಟಲಿನಿಂದ ಕಫವನ್ನು ಉಗುಳಿ ಹಾಕುವ ಹಾಗೆ ಬಿಸಾಡುವೆನು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನಗೆ ದೊರೆತ ಸಂದೇಶವಾಣಿಗಳನ್ನು ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ನೊಂದಿಗೆ ಅಷ್ಟು ಸರಿಹೊಂದಿಸಿ ನೋಡುತ್ತಿರುವಾಗ, ನಾವು ಸಹ ನಮ್ಮ ಸ್ವಪ್ನಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಜ್ಞೆಗಳಿಗೆ ಅನುಸಾರವಾಗಿ ವ್ಯಾಖ್ಯಾನ ಮಾಡಬೇಕಾಗಿದೆ. ಸ್ವಪ್ನವು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀರ್ಪು ಮತ್ತು ಸುನ್ನತ್‌ಗೆ ವಿರುದ್ಧವಾಗಿದ್ದರೆ ಅದು ತಿರಸ್ಕರಿಸಲ್ಪಡಲು ಯೋಗ್ಯ ಎಂದು ಭಾವಿಸಬೇಕು. ಏಕೆಂದರೆ ಪವಿತ್ರ ಖುರ್‌ಆನಿನ ವಿರುದ್ಧವಾದ ಸ್ವಪ್ನ ಸತ್ಯವಾಗಿರಲು ಸಾಧ್ಯವಿಲ್ಲ. ಅದೇ ರೀತಿ ಸುನ್ನತ್‌ಗೆ ವಿರುದ್ಧವಾದ ಮತ್ತು ಹದೀಸಿಗೆ ವಿರುದ್ಧವಾದ ಸ್ವಪ್ನಗಳು ಸಹ ಸತ್ಯವಾಗಿರಲಾರದು.

ಆದುದರಿಂದ ಒಳಿತನ್ನು ಮಾಡುವ ಬಗ್ಗೆಯಾದರೂ ಸಹ ಸ್ವಪ್ನವನ್ನು ಆಧಾರವಾಗಿಟ್ಟುಕೊಂಡು ಶಕ್ತಿಗೆ ಮೀರಿ ಕಷ್ಟಪಡುವುದು ತಪ್ಪಾದುದಾಗಿದೆ.

ಅದು ತಪ್ಪು ಮಾತ್ರವಲ್ಲ ಅತಿರೇಕದ ಕೃತ್ಯವೂ ಕೆಲವು ಸಾರಿ ಪಾಪವೂ ಆಗುತ್ತದೆ. ಆದರೆ ಅಲ್ಲಾಹನು ಯಾರನ್ನಾದರೂ ಧರ್ಮೋದ್ಧಾರಕ್ಕಾಗಿ ನಿಯೋಜಿಸಲು ಆರಿಸುವವನಾದರೆ, ಅಂತಹ ವ್ಯಕ್ತಿಯೊಂದಿಗೆ ಅಲ್ಲಾಹನ ಸಂಬಂಧ ಸಾಮಾನ್ಯ ಜನರೊಂದಿಗೆ ಇರುವ ಸಂಬಂಧಕ್ಕಿಂತ ಸಂಪೂರ್ಣವಾಗಿ ಬೇರೆಯಾಗಿರುತ್ತದೆ. ಅಂತಹ (ಮಾಮೂರ್ ಮಿನಲ್ಲಾಹ್) ವ್ಯಕ್ತಿಗಳು ಸಾಮಾನ್ಯ ಜನರ ಹಾಗೆ ಇರುವುದಿಲ್ಲ. ಅವರನ್ನು ಯಾವುದಾದರೂ ಸಾಮಾನ್ಯ ವ್ಯಕ್ತಿಯೊಂದಿಗೆ ಹೋಲಿಸಲಾಗದು. ಈ ಸಂಭವದ ಬಗ್ಗೆ ವಿವರಿಸುವಾಗ ಪ್ರಾಯಶಃ ಕೆಲವರು ಯೋಚಿಸಬಹುದು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆರು ತಿಂಗಳು ಉಪವಾಸ ಅನುಷ್ಠಿಸಿದ್ದರೆಂದು. ಇದರ ಬಗ್ಗೆ ಒಂದನೆಯದಾಗಿ ತಿಳಿಯಬೇಕಾದುದೇನೆಂದರೆ, ಅವರನ್ನು ಅಲ್ಲಾಹನು ನುಬುವ್ವತ್ ಸ್ಥಾನದಲ್ಲಿ ನಿಲ್ಲಿಸುವವನಾಗಿದ್ದನು. ಎರಡನೆಯದಾಗಿ ಇದರ ಬಗ್ಗೆ ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಏನು ಹೇಳಿದರು, ಏನು ಉಪದೇಶ ನೀಡಿದರು ಎಂದು ಸಹ ನೋಡಬೇಕಾಗಿದೆ. ಅದನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳಿದರು: ಈ ರೀತಿ ಮಾಡುವಂತೆ ನಾನು ಯಾರಿಗೂ ಸಲಹೆ ನೀಡುವುದಿಲ್ಲ. ನಾನು ನನ್ನ ಸ್ವಂತ ಇಚ್ಛೆಯಿಂದ ಹಾಗೆ ಮಾಡಿದ್ದೂ ಅಲ್ಲ. ನೆನಪಿಡಬೇಕಾದುದೇನೆಂದರೆ ನಾನು ಸ್ಪಷ್ಟವಾದ ಆತ್ಮದರ್ಶನದ ಮೂಲಕ ಅಲ್ಲಾಹನಿಂದ ತಿಳಿದುಕೊಂಡು ಎಂಟು ಅಥವಾ ಒಂಭತ್ತು ತಿಂಗಳು ಶಾರೀರಿಕ ಕಷ್ಟಗಳಿಗೊಳಪಟ್ಟೆನು. ಹಸಿವೆ ಮತ್ತು ದಾಹದ ರುಚಿ ಅನುಭವಿಸಿದೆನು. ಅನಂತರ ನಾನು ಈ ರೀತಿ ಶಾಶ್ವತವಾಗಿ ಮುಂದುವರಿಸುವುದನ್ನು ಬಿಟ್ಟೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಉನ್ನತ ಸ್ಥಾನ ನೀಡಲಿಕ್ಕೆ ಇದ್ದುದರಿಂದ ಅವರಿಗೆ ಅನುಮತಿ ದೊರಕಿತು. ಅನಂತರ ಅವರು ಎಂದೂ ಹಾಗೆ ಮಾಡಲಿಲ್ಲ. ಅವರು ಕೆಲವೊಮ್ಮೆ ತಾನು ಉಪವಾಸ ಅನುಷ್ಠಿಸಿದ ಬಗ್ಗೆ ಹೇಳುತ್ತಿದ್ದರು. ಆದರೆ ಅವರು ತನ್ನನ್ನು ನಂಬಿದವರೊಂದಿಗೆ ಹಾಗೆ ಮಾಡಬಾರದೆಂದು ಹೇಳುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ವಿರೋಧಿಗಳು ಹೀಗೆ ದೋಷಾರೋಪ ಮಾಡುತ್ತಾರೆ: ಅವರು ಬಂದು ಒಂದು ಹೊಸ ಜಮಾಅತ್ ಸ್ಥಾಪಿಸಿ ಮುಸ್ಲಿಮರಲ್ಲಿ ಒಡಕು ಉಂಟು ಮಾಡಿದರು. ಅವರು ಅವರ ಮಾತಿನ ಪ್ರಕಾರ ಎಪ್ಪತ್ತಮೂರನೆಯ ಪಂಗಡ ರೂಪಿಸಿದರು. ಅವರು ಪಂಗಡಗಳನ್ನು ಕಡಿಮೆ ಮಾಡಬೇಕಾಗಿತ್ತು. ಆದರೆ ಒಂದು ಹೊಸ ಪಂಗಡ ನಿರ್ಮಿಸಿ ಮುಸ್ಲಿಮರಲ್ಲಿ ಹೆಚ್ಚು ಒಡಕನ್ನು ಉಂಟುಮಾಡಿದರು ಎಂದು ಆರೋಪಿಸುತ್ತಾರೆ. ಇಲ್ಲಿ ನೆನಪಿಡ ಬೇಕಾದುದೇನೆಂದರೆ, ಪ್ರವಾದಿಗಳು ಆಗಮಿಸುವಾಗ ಇಂತಹ ಮಾತುಗಳನ್ನು ಜನರು ಹೇಳುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಸಹ ಮಕ್ಕದ ಜನರು ಹೀಗೆ ದೋಷಾರೋಪ ಮಾಡುತ್ತಿದ್ದರು. ಸಹೋದರರ ಮಧ್ಯೆ ಒಡಕನ್ನು ಸೃಷ್ಟಿಸಿ ಅವರನ್ನು ಬೇರೆ ಬೇರೆಯಾಗುವಂತೆ ಮಾಡಿದರು. ನಮ್ಮಲ್ಲಿ ಬಿರುಕನ್ನು ಉಂಟು ಮಾಡಿದರು. ಶತ್ರುತ್ವವನ್ನು ಉಂಟುಮಾಡಿದರು ಎಂದೆಲ್ಲಾ ಆರೋಪಿಸುತ್ತಿದ್ದರು. ಆದರೆ ವಾಸ್ತವಿಕವಾಗಿ ಅವರಲ್ಲಿ ಒಡಕು ಮೊದಲೇ ಇತ್ತು. ಇಂದಿನ ಕಾಲದ ಮುಸ್ಲಿಮರ ಸ್ಥಿತಿಯೂ ಹೀಗೆಯೇ ಆಗಿದೆ. ಒಡಕು ಅವರಲ್ಲಿ ಮೊದಲೇ ಇತ್ತು. ಈಗ ಸಹ ಅದೇ ರೀತಿ ಇದೆ. ಅಲ್ಲಾಹನು ಪ್ರವಾದಿಯನ್ನು ಕಳುಹಿಸುವುದು ಒಡಕನ್ನು ದೂರಸರಿಸಿ ಜನರನ್ನು ಒಗ್ಗೂಡಿಸಲಿಕ್ಕಾಗಿದೆ. ಸತ್ಯ ವಿಶ್ವಾಸವನ್ನು ಹೊಂದುವವರು ಸಮಾಧಾನ ಪಡೆಯುತ್ತಾರೆ ಮತ್ತು ಅವರು ಐಕ್ಯತೆ ಹೊಂದುತ್ತಾರೆ. ಅವರು ಒಡಕಿನಿಂದ ದೂರ ಸರಿಯುತ್ತಾರೆ. ಆದರೆ ವಿರೋಧಿಗಳು ಒಡಕನ್ನು ಹೊಂದಿರುತ್ತಾರೆ. ನಮ್ಮ ವಿರುದ್ಧ ಈ ಜನರು ಎಷ್ಟು ಒಗ್ಗಟ್ಟಿನಿಂದ ವಿರೋಧ ಪ್ರಕಟಿಸುತ್ತಿರುವರಾದರೂ ಅವರು ಪರಸ್ಪರ ಒಡೆದು ಹೋದವರಾಗಿದ್ದಾರೆ. ಅವರ ಹೃದಯ ಒಡೆದು ಹೋಗಿದೆ. ಅವರು ಪರಸ್ಪರ ಐಕ್ಯತೆ ಹೊಂದಿಲ್ಲ. ಅವರ ಅವನತಿ ಆಗುತ್ತಾ ಇರುತ್ತದೆ. ಅವರು ಈ ಕಾಲ ಘಟ್ಟದ ಇಮಾಮರನ್ನು ನಂಬುವ ತನಕ ಅವರ ಸ್ಥಿತಿ ಹೀಗೆಯೇ ಮುಂದುವರಿಯುವುದು. ಈ ಜನರು ನಮ್ಮನ್ನು ಮುಸ್ಲಿಮರೆಂದು ಹೇಳಲಿ, ಅಮುಸ್ಲಿಮರೆಂದು ಹೇಳಲಿ ಅಥವಾ ಬೇರೆ ಯಾವುದಾದರೂ ಹೆಸರಿನಲ್ಲಿ ಕರೆಯಲಿ, ನಾವು ಅಲ್ಲಾಹನು ಹೇಳಿದ ವರ್ಣನೆ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವರ್ಣಿಸಿದ ಪ್ರಕಾರ ನಾವು ವಾಸ್ತವಿಕ ಮುಸ್ಲಿಮರಾಗಿದ್ದೇವೆ. ಈ ಹೆಸರನ್ನು ಹೇಳುವುದರಿಂದ ನಮ್ಮನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮುಸ್ಲಿಮರ ಒಡಕಿನ ಬಗ್ಗೆ ಚಿತ್ರಿಸುತ್ತಾ ಹೀಗೆ ಹೇಳಿದರು: ಒಬ್ಬರು ನನ್ನೊಂದಿಗೆ ಹೀಗೆ ಹೇಳಿದರು: ಒಬ್ಬ ಅಹ್ಲೇ ಹದೀಸ್ ಪಂಗಡದ ವ್ಯಕ್ತಿ ಹನಫೀ ಪಂಗಡದವರ ಮಸ್‌ಜಿದ್‌ನಲ್ಲಿ ಅವರೊಂದಿಗೆ ಸಾಮೂಹಿಕ ನಮಾಝ್ ಅನುಷ್ಠಿಸುತ್ತಿದ್ದರು ಅತ್ತಹಿಯ್ಯಾತ್ ಪ್ರಾರ್ಥನೆ ಮಾಡುವಾಗ ಆತ ಬೆರಳನ್ನು ಎತ್ತಿದನು. ಅವನು ಬೆರಳನ್ನು ಎತ್ತಿದ ಕೂಡಲೆ ನಮಾಝ್ ಅನುಷ್ಠಿಸುತ್ತಿದ್ದ ಇತರ ಎಲ್ಲರೂ ನಮಾಝನ್ನು ಬಿಟ್ಟು ''ಹರಾಮೀ ಹರಾಮೀ'' ಎಂದು ಕೂಗುತ್ತಾ ಅವನನ್ನು ಆಕ್ರಮಿಸಿದರು. ಆ ಹನಫಿಗಳ ಒಂದು ನಂಬಿಕೆ ಅತ್ತಹಿಯ್ಯಾತ್ ಪ್ರಾರ್ಥನೆ ಮಾಡುವಾಗ ಬೆರಳು ಎತ್ತ ಬಾರದು ಎಂದಾಗಿತ್ತು. ನಾವು ನಮಾಝ್ ಅನುಷ್ಠಿಸುತ್ತಿದ್ದೇವೆ. ನಮಾಝನ್ನು ಮುರಿಯುವುದು ಎಷ್ಟು ದೊಡ್ಡ ಅಪರಾಧ ಎಂದು ಅವರು ಯೋಚಿಸಲಿಲ್ಲ. ಅವರು ನಮಾಝ್ ಮುರಿದು ಆತನ ಬೆರಳನ್ನು ನೋಡುತ್ತಿದ್ದರು. ನಮಾಝನ್ನು ಮುರಿದು ಅವನನ್ನು ಬೈಯ್ಯುತ್ತಾ ಅವನಿಗೆ ಹೊಡೆಯಲು ತೊಡಗಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮುಸ್ಲಿಮರಲ್ಲಿ ಒಡಕು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಮೊದಲೇ ಇತ್ತು. ಅವರು ಆಗಮಿಸಿ ಸುಧಾರಣೆ ಮಾಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಈ ಒಡಕಿನ ಬಗ್ಗೆ ಒಬ್ಬರು ಪ್ರಶ್ನಿಸಿದರು: ಮುಸ್ಲಿಮರಲ್ಲಿ ಒಡಕು ಮೊದಲೇ ಇತ್ತು ನೀವು ಆಗಮಿಸಿ ಇನ್ನಷ್ಟು ಒಡಕನ್ನು ಉಂಟು ಮಾಡುತ್ತಾ ಒಂದು ಪ್ರತ್ಯೇಕ ಹೊಸ ಪಂಗಡವನ್ನು ಸೃಷ್ಟಿಸಿದಿರಿ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ಒಳ್ಳೆಯ ಹಾಲನ್ನು ಸಂರಕ್ಷಿಸಲು ಅದನ್ನು ಮೊಸರಿನೊಂದಿಗೆ ಸೇರಿಸಿಡುತ್ತಾರೋ ಅಥವಾ ಬೇರೆಯಾಗಿ ಇರಿಸುತ್ತಾರೋ? ಹಾಲನ್ನು ಕೆಟ್ಟು ಹೋಗದಂತೆ ಸಂರಕ್ಷಿಸಲು ಮೊಸರಿನಿಂದ ಪ್ರತ್ಯೇಕವಾಗಿ ದೂರ ಇರಿಸುತ್ತಾರೆ. ಏಕೆಂದರೆ ಮೊಸರಿನ ಒಂದು ಹನಿ ಬಿದ್ದರೂ ಹಾಲು ಕೆಟ್ಟು ಹೋಗುತ್ತದೆ. ಮೊಸರಿನೊಂದಿಗೆ ಒಳ್ಳೆಯ ಹಾಲು ಒಂದು ನಿಮಿಷ ಸಹ ಕೆಟ್ಟು ಹೋಗದೆ ಇರಲಾರದು. ಆದುದರಿಂದ ಅಲ್ಲಾಹನಿಂದ ನಿಯೋಜಿತರಾದವರಿಂದ ಸ್ಥಾಪಿತವಾದ ಜಮಾಅತನ್ನು ವಿರೋಧಿ ಜಮಾಅತ್‌ನಿಂದ ಬೇರೆಯಾಗಿ ಇರಿಸುವುದು ಆವಶ್ಯಕವಾಗಿದೆ. ಬೇರೆಯಾಗಿರುವ ಜಮಾಅತ್ ಅಲ್ಲಾಹನಿಂದ ನಿಯೋಜಿತರಾದವರು ಸ್ಥಾಪಿಸಿದ ಜಮಾಅತ್ ಆಗಿದೆ. ಬಿಗಡಾಯಿಸಲ್ಪಟ್ಟವರಿಂದ ಅವರನ್ನು ಬೇರೆಯಾಗಿ ಇರಿಸುವುದು ಆವಶ್ಯಕವಾಗಿದೆ. ರೋಗಿಗಳಿಂದ ದೂರ ಸರಿಯದಿದ್ದರೆ ಆರೋಗ್ಯವಂತನೂ ರೋಗಬಾಧಿತನಾಗುತ್ತಾನೆ. ಅದೇ ರೀತಿ ಅಲ್ಲಾಹನಿಂದ ನಿಯೋಜಿತರಾದವರು ಸ್ಥಾಪಿಸಿದ ಜಮಾಅತನ್ನು ಆಧ್ಯಾತ್ಮಿಕ ರೋಗಿಗಳಿಂದ ಅಲ್ಲಾಹನು ದೂರವಾಗಿ ಇರಿಸುತ್ತಾನೆ. ಇದು ಅಲ್ಲಾಹನ ನಡವಳಿಕೆಯಾಗಿದೆ.

ಅಲ್ಲಾಹನು ಹೇಳುತ್ತಾನೆ: **ಯಾ ಅಯ್ಯುಹಲ್ಲಝೀನ ಆಮನೂ ಖೂ ಅನ್‌ಫುಸಕುಮ್ ವ ಅಹ್‌ಲೀಕುಮ್‌ನಾರ.** ಓ ಸತ್ಯವಿಶ್ವಾಸಿಗಳೇ ನೀವು ನಿಮ್ಮ ಮತ್ತು ನಿಮ್ಮ ಕುಟುಂಬದವರ ಜೀವಗಳನ್ನು ಅಗ್ನಿಯಿಂದ ರಕ್ಷಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದ ಹುಡುಗಿ ಅಹ್ಮದಿಯೇತರನನ್ನು ವಿವಾಹವಾದರೆ ತನ್ನ ಪತಿಯ ಕಾರಣದಿಂದ ಖಂಡಿತವಾಗಿಯೂ ಅವಳು ಅಹ್ಮದಿಯ್ಯತ್ತಿನಿಂದ ದೂರವಾಗುವಳು. ಅಥವಾ ಕಷ್ಟಪಡುತ್ತಾ ಸಾಯುವಳು. ಅಹ್ಮದಿಯೇತರರಿಂದ ದೂರ ಸರಿಯದಿದ್ದರೆ ಹೀಗೆಯೇ ಆಗುತ್ತದೆ. ಅವರ ಮನೆಗೆ ವಿವಾಹಿತೆಯಾಗಿ ಹೋದರೆ ದೌರ್ಜನ್ಯಗಳನ್ನು ಅನುಭವಿಸಬೇಕಾಗುತ್ತದೆ.

ಅಹ್ಮದಿಯೇತರರೊಂದಿಗೆ ಅಹ್ಮದಿಯರಾದ ನಾವು ವಿವಾಹ ಸಂಬಂಧ ಮಾಡುವುದಿಲ್ಲವೆಂದು ನಮ್ಮ ಮೇಲೆ ದೋಷರೋಪ ಹೊರಿಸುತ್ತಾರೆ. ಇದು ಸಮಾಜದಲ್ಲಿ ಒಡಕನ್ನುಂಟುಮಾಡಲಿಕ್ಕೆ ಅಲ್ಲ. ನಮ್ಮನ್ನು ಸಂರಕ್ಷಿಸಲು ಮಾಡುವ ಪ್ರಯತ್ನವಾಗಿದೆ. ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಪ್ರಯತ್ನವಾಗಿದೆ. ಆದರೆ ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಆತ್ಮ ಹೊಂದಿದವರಿಗೆ ಮಾತ್ರ ಇಂತಹ ಯೋಚನೆ ಬರಲು ಸಾಧ್ಯ. ಅಹ್ಮದಿ ಹುಡುಗಿಯರನ್ನು ಬಿಟ್ಟು ಅನ್ಯರೊಂದಿಗೆ ವಿವಾಹ ಸಂಬಂಧ ಸ್ಥಾಪಿಸಲು ಬಯಸುವ ಅಹ್ಮದಿ ತರುಣರು ಇಂತಹ ಯೋಚನೆ ಹೊಂದಬೇಕು. ಅಹ್ಮದಿ ತರುಣರು ಮತ್ತು ತಾವು ನೈಜ ಅಹ್ಮದಿಯರೆಂದು ಹೇಳಿಕೊಳ್ಳುವವರು ತಮ್ಮ ಸ್ವತಃ ಆಶಾಭಿಲಾಷೆಗಳಿಗೆ ಆದ್ಯತೆ ನೀಡದೆ ವಿವಾಹದ ಸಮಯ ಬಂದಾಗ ಅಹ್ಮದಿ ತರುಣಿಯರನ್ನೇ ವಿವಾಹವಾಗಬೇಕು. ತಮ್ಮ ಲೌಕಿಕ ಆಶಾಭಿಲಾಷೆಗಳ ಮೇಲೆ ತಮ್ಮ ಮುಂದಿನ ಪೀಳಿಗೆಗೆ ಮತ್ತು ತಮ್ಮ ಧರ್ಮಕ್ಕೆ ಆದ್ಯತೆ ನೀಡಬೇಕು. ಪೀಳಿಗೆಗಳು ನಾಶವಾಗುವುದು ತರುಣಿಯರು ಅಹ್ಮದಿಯೇತರನನ್ನು ವಿವಾಹವಾಗುವುದರಿಂದ ಮಾತ್ರವಲ್ಲ. ಅಹ್ಮದಿ ಯುವಕರು ಅನ್ಯ ಯುವತಿಯರನ್ನು ವಿವಾಹವಾಗುವುದರಿಂದಲೂ ಪೀಳಿಗೆಗಳು ನಾಶವಾಗುತ್ತವೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಮನವರಿಕೆ ಮಾಡಿಕೊಳ್ಳಬೇಕಾದುದು ಏನೆಂದರೆ ಸಮಾಜದ ಒತ್ತಡಕ್ಕೆ ಪಾತ್ರನಾಗಿ ಅಥವಾ ವಿವಾಹ ಸಂಬಂಧಗಳ ಕಾರಣದಿಂದ ನಾವು ಅಹ್ಮದಿಯಾಗಿರುವುದಲ್ಲ. ಧರ್ಮವನ್ನು ಮನವರಿಕೆ ಮಾಡಿಕೊಂಡು ಅಹ್ಮದಿಯಾಗಿರಲು ಪ್ರಯತ್ನ ಮಾಡಬೇಕು. ಅಹ್ಮದಿ ತರುಣರು ಹೊರಗಿನಿಂದ ವಿವಾಹವಾಗುತ್ತಾ ಇದ್ದರೆ ಅಹ್ಮದಿ ಯುವತಿಯರು ಯಾರನ್ನು ವಿವಾಹವಾಗಬೇಕು.? ಆದುದರಿಂದ ಅಹ್ಮದಿ ತರುಣರು ಸಹ ಚಿಂತಿಸಬೇಕು. ಈಗಲೇ ಇದರ ಬಗ್ಗೆ ಜಾಗರೂಕರಾಗದಿದ್ದರೆ –ಇದರ ಬಗ್ಗೆ ಈಗ ಆಸಕ್ತಿ ವರ್ಧಿಸಿವೆ– ಇದು ಮತ್ತಷ್ಟೂ ವರ್ಧಿಸುವುದು ಮತ್ತು ಮುಂದಿನ ಪೀಳಿಗೆಗಳಲ್ಲಿ ಅಹ್ಮದಿಯ್ಯತ್ ಬಾಕಿಯಾಗಿ ಉಳಿಯಲಾರದು. ಅಲ್ಲಾಹನ ಪ್ರತ್ಯೇಕ ಅನುಗ್ರಹ ದೊರೆತರೆ ಹೊರತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಹೀಗೆ ಸೂಚಿಸಿದ್ದರು. ಅಹ್ಮದಿ ಅವಿವಾಹಿತ ಯುವಕರ ಮತ್ತು ಯುವತಿಯರ ಹೆಸರು ಒಂದು ರಿಜಿಸ್ಟರ್‌ನಲ್ಲಿ ದಾಖಲಿಸಬೇಕು. ಒಬ್ಬರ ಸಲಹೆ ಪ್ರಕಾರ ಹೀಗೆ ಮಾಡಲಾಗಿತ್ತು. ಆ ವ್ಯಕ್ತಿ ಹೀಗೆ ಹೇಳಿದ್ದರು: ಹುಝೂರ್ ವಿವಾಹ ಮಾಡಿಸಲು ಬಹಳ ಕಷ್ಟವಾಗುತ್ತದೆ. ಅಹ್ಮದಿಯೇತರರೊಂದಿಗೆ ವಿವಾಹ ಸಂಬಂಧ ಮಾಡಬಾರದೆಂದು ತಾವು ಹೇಳುತ್ತಿರುವಿರಿ. ನಮ್ಮ ಜಮಾಅತಿನ ಜನರು ದೂರ ದೂರ ವಾಸಿಸುತ್ತಾರೆ. ನಾವು ಏನು ಮಾಡಬೇಕು? ಆದುದರಿಂದ ಅವಿವಾಹಿತ ಹುಡುಗ ಮತ್ತು ಹುಡುಗಿಯರ ಹೆಸರು ದಾಖಲಿಸಿದ ಒಂದು ರಿಜಿಸ್ಟರ್ ಸಿದ್ಧಪಡಿಸಬೇಕು. ಹೀಗೆ ಮಾಡಿದರೆ ವಿವಾಹ ಸಂಬಂಧ ಸ್ಥಾಪನೆ ಸುಲಭವಾಗುವುದು ಎಂದು ಸಲಹೆ ನೀಡಿದರು. ಈ ಸಲಹೆ ನೀಡಿದ ವ್ಯಕ್ತಿಗೆ ಒಬ್ಬ ಪುತ್ರಿ ಇದ್ದಳು. ನಂತರ ಒಂದು ವಿವಾಹ ಪ್ರಸ್ತಾಪದೊಂದಿಗೆ ಒಬ್ಬ ಹುಡುಗ ಬಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವನನ್ನು ಈ ವ್ಯಕ್ತಿಯ ಮನೆಗೆ ಕಳುಹಿಸಿದರು. ಆ ವ್ಯಕ್ತಿ ಕ್ಷುಲ್ಲಕ ನೆವನ ಹೇಳಿ ವಿವಾಹ ಪ್ರಸ್ತಾಪ ತಿರಸ್ಕರಿಸಿದರು. ಮತ್ತು ಅಹ್ಮದಿಯೇತರನ ಜೊತೆ ತನ್ನ ಮಗಳ ವಿವಾಹ ನಡೆಸಿದರು. ಈ ವಿಷಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿದಾಗ ಅವರು ಹೇಳಿದರು: ಇನ್ನು ಮುಂದೆ ನಾನು ವಿವಾಹದ ಬಗ್ಗೆ ಹಸ್ತಕ್ಷೇಪ ನಡೆಸುವುದಿಲ್ಲ. ಈ ರೀತಿ ಆ ಯೋಜನೆ ಮುಂದುವರಿಯಲಿಲ್ಲ. ಆಗ ಅದು ಮುಂದುವರಿದಿದ್ದರೆ ಇಂದು ಅಹ್ಮದಿಯರಿಗೆ ಈಗ ಸಂಭವಿಸುವ ಕಷ್ಟ ಸಂಭವಿಸುತ್ತಿರಲಿಲ್ಲ. ಕೆಲವು ಸಾರಿ ಒಬ್ಬ ಪ್ರವಾದಿಯ ಮಾತನ್ನು ತಿರಸ್ಕರಿಸಿರುವುದು ಜಮಾಅತಿಗೆ ಒಂದು ಪರೀಕ್ಷೆಯಾಗಿ ಮಾರ್ಪಡುತ್ತದೆ.

ಕೆಲವು ಜನರು ಅಹಂಭಾವದಿಂದ ಉತ್ತಮ ವಿವಾಹ ಸಂಬಂಧಗಳನ್ನು ನಿರಾಕರಿಸುತ್ತಾರೆ. ಹುಡುಗನೂ ಇಷ್ಟಪಡುತ್ತಾನೆ. ಹುಡುಗಿಯೂ ಇಷ್ಟಪಡುತ್ತಾಳೆ. ಹಾಗಿದ್ದೂ ಕೆಲವು ಸಾರಿ ನಾನು ಸಹ ವಿವಾಹ ಸಂಬಂಧ ಸ್ಥಾಪಿಸಿರಿ ಎಂದು ಹೇಳಿದಾಗ ಅಹಂಭಾವದಿಂದ ನಿರಾಕರಿಸುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತನ್ನು ನಿರಾಕರಿಸುವ ಜನರು ಇದ್ದಾಗ ನನ್ನ ಮಾತನ್ನು ತಿರಸ್ಕರಿಸುವುದು ದೊಡ್ಡ ವಿಷಯವೇನೂ ಅಲ್ಲ. ಆದರೆ ಇಂತಹ ಜನರ ಅಂತಿಮ ಗತಿ ಭಯಾನಕವಾಗಿರುತ್ತದೆ. ಆದುದರಿಂದ ಅಹ್ಮದಿ ಹುಡುಗ ಮತ್ತು ಹುಡುಗಿ ವಿವಾಹವಾಗಲು ಒಪ್ಪುವುದಾದರೆ ಅವರ ತಂದೆ ತಾಯಂದಿರು ಹಟಮಾಡಬಾರದು. ಅವರು ಜಾತಿಗಳ ಬಗ್ಗೆ ಅಹಭಾವ ಹೊಂದಬಾರದು. ವಿವಾಹದ ಬಗ್ಗೆ ಒಂದು ವಿಷಯ ಸ್ಪಷ್ಟವಾಗಬೇಕು. ವಿವಾಹಕ್ಕೆ ಸಂಬಂಧಿಸಿ ವಧುವಿನ ಸಮ್ಮತಿ ಇರಬೇಕಾದುದು ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ವಧುವಿನ ಸಮ್ಮತಿ ಇರಬೇಕೆಂದು ಹೇಳಿದ್ದಾರೆ. ಅದೂ ಅಲ್ಲದೆ ಇಸ್ಲಾಮ್ ಹೇಳುವುದೇನೆಂದರೆ ವಲಿಯ ಅನುಮತಿಯಿಲ್ಲದ ನಿಕಾಹ್ ಧರ್ಮಬದ್ಧವಲ್ಲ, ಇಸ್ಲಾಮಿ ಶರೀಅತ್ ಸ್ಪಷ್ಟಪಡಿಸಿದ ವಿನಾಯಿತಿಗಳ ಸಂದರ್ಭದಲ್ಲಿ ಹೊರತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ– ಹುಡುಗಿಯ ಸಮ್ಮತಿಯನ್ನು ನೋಡಿಕೊಂಡು ವಲಿಯ ಅನುಮತಿ ಪಡೆಯದೆ ನಿಕಾಹ್ ಮಾಡುವುದು ಶರೀಅತ್‌ಗೆ ವಿರುದ್ಧವಾಗಿದೆ.

ಆದುದರಿಂದ ಹಿಂದೆ ಹೇಳಿದ ಹಾಗೆ ತಂದೆ ತಾಯಂದಿರು ಸುಳ್ಳು ಅಭಿಮಾನದ ಹೆಸರಿನಲ್ಲಿ ನಿಷ್ಕಾರಣವಾಗಿ ವಿವಾಹಕ್ಕೆ ಅಡ್ಡಿ ಉಂಟುಮಾಡಬಾರದು. ಹತ್ಯೆಯಂತಹ ದೌರ್ಜನ್ಯ ಮಾಡುವವರಾಗಬಾರದು. ಅಂತೆಯೇ ಹುಡುಗಿಯರಿಗೆ ಇಸ್ಲಾಮ್ ಅನುಮತಿ ನೀಡುವುದಿಲ್ಲ, ಅವರು ಮನೆಯಿಂದ ಹೊರಟು ನ್ಯಾಯಾಲಯಗಳಲ್ಲಿ ಅಥವಾ ಯಾವನೇ ಮೌಲವಿಯ ಮೂಲಕ ವಿವಾಹ ಅಥವಾ ನಿಕಾಹ್‌ಮಾಡಲು. ಕೆಲವು ನಿರ್ಬಂಧಿತ ಪರಿಸ್ಥಿತಿಗಳಲ್ಲಿ ಹುಡುಗಿಯರು ಖಲೀಫರಿಗೆ ದೂರು ಸಲ್ಲಿಸಬಹುದಾಗಿದೆ. ಆಗ ಪರಿಸ್ಥಿತಿಗೆ ಅನುಸಾರವಾಗಿ ಅವರು ಉತ್ತಮ ತೀರ್ಪು ನೀಡುವರು.

ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ತತ್ವವನ್ನು ಹುಡುಗಿ ತನ್ನ ಮುಂದೆ ಇರಿಸುವುದಾದರೆ ಮತ್ತು ಹುಡುಗನೂ ತನ್ನ ಮುಂದೆ ಇರಿಸುವುದಾದರೆ ಅಲ್ಲಾಹನು ಆಗ ಅನುಗ್ರಹ ನೀಡುವನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಖುತ್‌ಬದಲ್ಲಿ ಹೀಗೆ ಹೇಳುತ್ತಾರೆ: ಅಲ್ಲಾಹನನ್ನು ಸ್ಮರಿಸಲು ಮತ್ತು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು ಮತ್ತು ಅಲ್ಲಾಹನನ್ನು ಪ್ರೀತಿಸಲು ಅವನ ಗುಣವಿಶೇಷಗಳನ್ನು ನಮ್ಮ ಮುಂದೆ ಇರಿಸಿ ಅವುಗಳ ಬಗ್ಗೆ

ಗಾಢವಾಗಿ ಚಿಂತಿಸಬೇಕಾದುದು ಆವಶ್ಯಕವಾಗಿದೆ. ಆ ಗುಣವಿಶೇಷಗಳ ಮೂಲಕ ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ವರ್ಧಿಸಬೇಕು. ಆಗ ಮಾತ್ರ ಅಲ್ಲಾಹನನ್ನು ಪ್ರೀತಿಸುವುದರ ಸರಿಯಾದ ಅರ್ಥ ಮನವರಿಕೆ ಆಗುತ್ತದೆ. ಸಾಮಾನ್ಯವಾಗಿ ಜಾರಿಯಲ್ಲಿರುವ ಪ್ರಕೃತಿ ನಿಯಮವೇನೆಂದರೆ ಲೋಕದಲ್ಲಿ ಬಾಹ್ಯ ಸಂಬಂಧ ಮತ್ತು ಪ್ರೀತಿ ಹುಟ್ಟಿಸಲು, ಯಾರನ್ನು ಪ್ರೀತಿಸಲಾಗುತ್ತಿದೆಯೋ ಆ ವ್ಯಕ್ತಿಯ ಸಾಮೀಪ್ಯ ಗಳಿಸಬೇಕು ಅಥವಾ ಕನಿಷ್ಠಪಕ್ಷ ಆ ವ್ಯಕ್ತಿಯ ಚಿತ್ರ ನಮ್ಮ ಭಾವನೆಯಲ್ಲಿ ಇರಬೇಕು. ಆಗ ಸಂಬಂಧ ಮತ್ತು ಇಷ್ಟ ಪ್ರಕಟಿಸಲಾಗುತ್ತಿದೆ. ಇದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರೀತಿಸಲು ಯಾವುದಾದರೂ ವ್ಯಕ್ತಿ ಮುಂದೆ ಇರಬೇಕು ಅಥವಾ ಆ ವ್ಯಕ್ತಿಯ ಚಿತ್ರ ಮುಂದೆ ಇರಬೇಕು. ಇಸ್ಲಾಮ್ ಹೇಳಿದ ಈ ಮಾತು ಹೊಸದೇನೂ ಅಲ್ಲ. ಇಂದಿನ ಕಾಲದಲ್ಲಿ ವಿವಾಹ ಸಂಬಂಧ ಬಯಸುವವರು ಹೇಳುತ್ತಾರೆ: ಫೋಟೋ ಕಳುಹಿಸಿರಿ ಎಂದು. ಇಸ್ಲಾಮ್ ಹೀಗೆ ಹೇಳಿದೆ: ವಿವಾಹ ಬಯಸುವವರು ವ್ಯಕ್ತಿಯ ರೂಪವನ್ನು ನೋಡಬೇಕೆಂದು. ಆದರೆ ರೂಪ ನೋಡಲು ಸಾಧ್ಯವಾಗದಿದ್ದರೆ ಹಿಂದಿನ ಕಾಲದಲ್ಲಿ ಚಿತ್ರ ನೋಡಬಹುದಾಗಿತ್ತು ಈಗ ಸಹ ನೋಡಬಹುದಾಗಿದೆ.

ಅಹ್ಮದಿಯೇತರ ಮೌಲವಿಗಳಿಗೆ ಸಂಬಂಧಿಸಿದ ಒಂದು ವಿಷಯ ವಿವರಿಸುತ್ತೇನೆ. ಅವರು ಜನರ ಹೃದಯಗಳಲ್ಲಿ ತಮ್ಮ ದ್ವೇಷಾಸೂಯೆ ಗಳನ್ನು ಹೇಗೆ ತುಂಬಿಸಲು ಪ್ರಯತ್ನಿಸುತ್ತಿರುವುದು ಮತ್ತು ಜನರನ್ನು ಉದ್ರೇಕಿಸುತ್ತಿದ್ದಾರೆಂದು ತಿಳಿಯುತ್ತದೆ. ಅವರು ಹೇಗೆ ಸುಳ್ಳು ಹೇಳುತ್ತಿದ್ದರು ಮತ್ತು ಈಗಲೂ ಸುಳ್ಳು ಹೇಳುತ್ತಿದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಎಂತಹ ದೋಷಾರೋಪ ಮಾಡುತ್ತಿದ್ದಾರೆ ಎಂದು ತಿಳಿಯುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಜಾದೂಗಾರನೆಂದು ಹೇಳುತ್ತಿದ್ದರು. ನನಗೆ ನೆನಪಿದೆ ಒಬ್ಬ ಸ್ನೇಹಿತರು ಹೇಳಿದರು: ಫಿರೋಜ್‌ಪುರದ ಪ್ರದೇಶದಲ್ಲಿ ಒಬ್ಬ ಮೌಲವಿ ಭಾಷಣ ಮಾಡುತ್ತಿದ್ದನು– ಅಹ್ಮದಿಯರ ಗ್ರಂಥಗಳನ್ನು ಓದಲೇಬಾರದು. ಖಾದಿಯಾನಿಗೆ ಖಂಡಿತ ಹೋಗಬಾರದು ಎಂದು ಹೇಳುತ್ತಿದ್ದರು. ಅನಂತರ ಆ ಸುಳ್ಳುಗಾರ ಮೌಲವಿ ತಾನೇ ಸ್ವತಃ ಸೃಜಿಸಿದ ಒಂದು ಸುಳ್ಳು ಕಥೆಯನ್ನು ತನ್ನ ಮಾತಿಗೆ ಬೆಂಬಲವಾಗಿ ವಿವರಿಸಿದನು. ಆದರೆ ಅಲ್ಲಾಹನು ಕೆಲವು ಸಾರಿ ಕೂಡಲೆ ಸುಳ್ಳನ್ನು ಬಹಿರಂಗಪಡಿಸುತ್ತಾನೆ. ಆ ಮೌಲವಿ ಭಾಷಣ ಮಾಡಿದಾಗ ಹಾಗೆಯೇ ಸಂಭವಿಸಿತು. ಆ ಸಭೆಯಲ್ಲಿ ಒಬ್ಬ ಅಹ್ಮದಿಯೇತರ ಮುಸ್ಲಿಮ್ ವಕೀಲರು ಕುಳಿತಿದ್ದರು. ಅವರು ಸಜ್ಜನರಾಗಿದ್ದರು. ಅವರು ಅಹ್ಮದಿಯರಾಗಿರಲಿಲ್ಲ. ಅವರು ಖಲೀಫತುಲ್ ಮಸೀಹ್ ಅವ್ವಲ್‌ರವರ ಬಳಿಗೆ ಚಿಕಿತ್ಸೆಗೋಸ್ಕರ ಖಾದಿಯಾನಿಗೆ ಹೋಗುತ್ತಿದ್ದರು. ಅವರು ಜನರೊಂದಿಗೆ ಹೇಳಿದರು: ನಾನು ಅಹ್ಮದಿ ಅಲ್ಲ ಎಂದು ನಿಮಗೆಲ್ಲರಿಗೂ ತಿಳಿದಿದೆ. ನಾನು ಚಿಕಿತ್ಸೆ ಪಡೆಯಲು ಖಾದಿಯಾನಿಗೆ ಹೋಗಿದ್ದೆನು. ಈ ಸಭೆಯಲ್ಲಿ ಮೌಲವಿ ಹೇಳಿದ ಎಲ್ಲಾ ಮಾತುಗಳು ಸುಳ್ಳಾಗಿವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಲ್ಲಿ ಜಾದೂಗಾರಿಕೆ ಇದೆ ಎಂದು ನಂಬುವವರು ಈಗ ಸಹ ಇದ್ದಾರೆ. ಇದಕ್ಕೆ ಕಾರಣವೇನೆಂದರೆ ಈ ಜಮಾಅತಿಗೆ ಸೇರುವವರನ್ನು ಹೊಡೆಯುತ್ತಾರೆ. ಅವರನ್ನು ಬೈಯ್ಯಲಾಗುತ್ತಿದೆ. ಅವರನ್ನು ಅಪಮಾನಿಸಲಾಗುತ್ತಿದೆ. ಅವರಿಗೆ ಆರ್ಥಿಕ ಹಾನಿ ಉಂಟು ಮಾಡಲಾಗುತ್ತಿದೆ. ಹೀಗಿದ್ದರೂ ಈ ಜನರು ಜಮಾಅತಿಗೋಸ್ಕರ ಆತ್ಮಾರ್ಪಣೆ ಮಾಡುತ್ತಾರೆ. ಆದರೂ ಅವರು ಅಹ್ಮದಿಯ್ಯತ್ತನ್ನು ತ್ಯಜಿಸುವುದಿಲ್ಲ. ವಿರೋಧಿಗಳು ಭಾವಿಸುವುದೇನೆಂದರೆ ಹೊಡೆತ, ಬೈಗಳು ಮತ್ತು ಹಾನಿಯ ಕಾರಣ ಅಹ್ಮದಿಯರು ಭಯಭೀತರಾಗಬೇಕೆಂದು. ಆದರೆ ಅಹ್ಮದಿಯರ ಮೇಲೆ ಯಾವ ಪ್ರಭಾವವೂ ಉಂಟಾಗುವುದಿಲ್ಲ. ಇದಕ್ಕೆ ಕಾರಣ ಖಂಡಿತವಾಗಿಯೂ ಅವರು ಜಾದೂಗಾರಿಕೆಗೆ ಒಳಗಾಗಿದ್ದಾರೆ. ಆ ಕಾರಣದಿಂದ ಅಹ್ಮದಿಯರು ತಮ್ಮ ವಿಶ್ವಾಸದಲ್ಲಿ ಸ್ಥಿರಚಿತ್ತರಾಗಿದ್ದಾರೆ ಎಂದು ಹೇಳುತ್ತಾರೆ.

ಇಂತಹ ಸುಳ್ಳುಗಾರ ಮೌಲವಿಗಳಿಂದ ಅಲ್ಲಾಹನು ಮುಸ್ಲಿಮ್ ಸಮುದಾಯವನ್ನು ರಕ್ಷಿಸಲಿ. ಮತ್ತು ಜನರು ಸತ್ಯವನ್ನು ಗುರುತಿಸುವ ಭಾಗ್ಯ ನೀಡಲಿ. ನಮಗೆ ಸಹ ನಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡುವ ಭಾಗ್ಯ ಲಭಿಸಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್ ಮುಕರ್‍ರಮ ಸಕೀನಾ ನಾಹೇದ್ (ಮುಕರ್‍ರಮ್ ಮುಹಮ್ಮದ್ ದೀನ್ ಸಾಹೇಬರ ಪುತ್ರಿ) ಮತ್ತು ಮುಕರ್‍ರಮ್ ಶೌಕತ್ ಗನೀ ಸಾಹೇಬ್ ಶಹೀದ್ (ಮುಕರ್‍ರಮ್ ಅಬ್ದುಲ್ ಗನೀ ಸಾಹೇಬರ ಪುತ್ರ) ಇವರಿಬ್ಬರ ಸದ್ಗುಣಗಳನ್ನು ವಿವರಿಸಿದರು. ನಮಾಝೆ ಜನಾಝ ಗಾಯಿಬ್ ಬಗ್ಗೆ ಪ್ರಕಟಿಸಿದರು).

———————*****———————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 08-04-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon